ಶ್ರೀ ವಿ. ಮಸಿಯಪ್ಪ .–ಸ್ವಾಮಿ, ಈ ಪ್ರಶ್ನೆಯ (ಆ)ಮತ್ತು(ಇ)ಗೆ ಉತ್ತರವಾಗಿ ಈ ಮೊದಲು ಸ. ನಂ. ೬೪-೧ರಲ್ಲಿ ಒಂದು ಎಕರೆ ೧೦ ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ೩೦ ಜನರಿತ ನಿವೇದನ ಹಂಚಿರುತ್ತದೆ. ಆದರಲ್ಲಿ ೫ ಜನ ಹರಿಜನರಿಗೆ ಮಾತ್ರ ನೀವೇಶನ ಕೊಡಲಾಗಿದೆ. ಅಂಗೆ ಹೇಳಿದ್ದೀರಿ. ಇನ್ನೂ ಅನೇಕ ಹರಿಜನರಿಗೆ ನಿವೇಶನ ಕೊಟ್ಟಿಲ್ಲಾ. ಅವರನ್ನು ೬೪–೧ರ ಜಮೀನಿಗೆ ಹೋಗಿ ಎಂದರೆ ಅವರು ಅಲ್ಲಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲಾ ಕಾರಣ ಏನೆಂದರೆ ಆ ಕಡೆ ತಗ್ಗು ಪ್ರದೇಶವಾಗಿದೆ ಅಲ್ಲದೆ ಆ ಕಡೆ ಹಣಿ ಇರುವುದರಿಂದ ಅದರ ಧೂಳು ಮನೆಯಲ್ಲಿ ಬೀಳುವುದರಿಂದ ಅವರು ಹೋಗುವುದಿಲ್ಲ ಎಂದು ಹೇಳುತ್ತಾರೆ, ಅವರುಗಳು ಮೊಕ್ಕಾ ಹೋಗಿ ಈ ವಿಷಯವನ್ನು ತಿಳಿಸಿದ್ದಾರೆ. ಅವರು ಸ. ನಂ ೮೭ರಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಖಾಲಿ ಜಾಗ ಇದೆ. ಆ ಜಾಗವನ್ನು ಕೊಡಿ ಎಂದು ಅವರು ಕೇಳಿದ್ದಾರೆ. ಆ ಜಾಗದಲ್ಲಿ ಯಾವ ಭೂಮಿಯಾಗಲಿ ಅಥವಾ ತೆಂಗಿನ ಗಿಡ ಆಗಲಿ ಇಲ್ಲಾ. ಆ ಜಾಗ ಅವರಿಗೆ ಲಾಯಕ್ಕಾಗಿದೆ. ಆದುದರಿಂದ ಆ ಜಾಗವನ್ನು ಅಕ್ವೈರ್ ಮಾಡಿಕೊಂಡು ಉಳಿದ ಹರಿಜನರಿಗೂ ಆದಷ್ಟು ಜಾಗ್ರತೆ ನಿವೇಶನ ಕೊಡುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ .— ಆದಷ್ಟು ಜಾಗ್ರತೆಯಾಗಿ ಇದಕ್ಕೆ ಸಂಬಂಧಪಟ್ಟ ಡೆಪ್ಯೂಟಿ ಕಮೀಷನರಿಗೆ ಹೇಳಿ ಅದನ್ನು ಮಾಡಿಸುತ್ತೇನೆ.

ಶ್ರೀ ವಿ. ಮಸಿಯಪ್ಪ .— ನಾನು ಮೊದಲೇ ಹೇಳಿದ ಹಾಗೆ ೬೪–೧ರ ಸರ್ವೆ ನಂಬರ್‌ನಲ್ಲಿರುವ ಜಾಗವನ್ನು ಅವರಿಗೆ ಕೊಡಿಸುವುದು ಬೇಡ ಸ. ನಂ. ೮೭ರಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಖಾಲಿ ಜಾಗ ಉಳಿದಿದೆ. ಆ ಜಾಗ ಎಲ್ಲ ಹರಿಜನರಿಗೂ ಸಿಕ್ಕುತ್ತದೆ. ಅಲ್ಲದೆ ಅನುಕೂಲವಾಗಿದೆ, ೬೪–೧ರ ಸರ್ವೆ ನಂಬರ್ ಜಾಗ ಬೇಡ. ಸ. ನಂ. ೮೭ರ ಜಾಗವನ್ನು ಆದಷ್ಟು ಜಾಗ್ರತೆ ಕೊಡಿಸಿಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ .–ಸ. ನಂ. ೮೭ರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜಾಗ ಉಳಿದಿದೆ ಅನ್ನುವುದನ್ನು ತಾವು ಹೇಳುತ್ತೀರಾ? ಇದರ ಬಗ್ಗೆ ಪುನಃ ಪರಿಶೀಲನೆ ಮಾಡಿ ಸಂಚಂಧಪಟ್ಟ ಹೌಸಿಂಗ್ ಮಿನಿಸ್ಟರ್ ಜೊತೆಯಲ್ಲಿ ಮಾತನಾಡಿ ಅದನ್ನು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Transfer of Employees working in Fisheries Department

277 SRI A. RAMACHANDRA (Sullya).—Will the Minister of State for Fisheries and Ports be pleased to state :—

(a) whether it is a fact Class IV Servants working in Karnataka State Fisheries Development Corporation have been transferred from Dakshina Kannada District (Mangalore) to Bellary District;

(b) the reasons for transferring Class IV servants belonging to Scheduled Castes to Bellary District though there are rules, not to transfer them outside the Taluk or the District;

(c) is it not violation of rules of the concerned officer for having transferre l them;

(d) the action taken on those Officers who have violated the rules ?

SRI D. B. PAWAR (Minister of State for Fisheries and Ports).—

(a) Yes.

(b) Most of the officials of Fisheries Department were working on deputation in the Karnataka State Fisheries Development Corporatiou since 1971. As there is no provision to continue these officials on

deputation beyond five years, they were repartriated to their parent Department at their voliton. Thirty-two class IV servants were repatriated to their parent department at their volition. Out of them nine were Scheduled Castes. These officials were transferred from the Fisheries Development Corporation as and when vacancies arose as there are no vacant posts of Class IV servants in the Dapartment. There were no vacant posts at that time at Mangalore. Therefore some of the Class IV servants have to be transferred to Kolar, Bangalore and Shimoga District inevitably.

(c) There is no violation of rules for having transferred them as there is no provision to continue Class IV servants on deputation beyond five years in Karnataka State Fisheries Development Corporation.

(d) As there is no violation of rules, the question of taking action against the officer does not arise.

ಶ್ರೀ ಎ. ರಾಮಚಂದ್ರ.—ಸ್ವಾಮಿ, ಈ ಮೀನುಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರನ್ನು ಮಂಗಳೂರು ಮೀನುಗಾರಿಕೆಯ ಅಭಿವೃದ್ಧಿ ಸಂಸ್ಥೆಗೆ ಡೆಪ್ಯೂಟೇಷನ್ ಮೇಲೆ ತೆಗೆದುಕೊಂಡಿದ್ದೆವುಅನ್ನುವ ಮಾತನ್ನು ಹೇಳಿದ್ದೀರಿ. ಹಾಗೆ ಒಂದು ವೇಳೆ ಈ ಒಂದು ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ತೆಗೆದು ಕೊಳ್ಳ ಬೇಕಾದರೆ ಆ ನೌಕರರಿಗೆ ತಾವು ಮೊದಲೇ ತಿಳಿಸಬೇಕಾಗಿತ್ತು. ತಮ್ಮನ್ನು ಇಲ್ಲಿಗೆ ತೆಗೆದುಕೊಳ್ಳ ಬೇಕಾದರೆ ಬರೇ ೫ ವರ್ಷಕ್ಕೆ ಮಾತ್ರ ತೆಗೆದುಕೊಳ್ಳುತ್ತೇವೆ, ನಂತರ ಕಾನೂನಿನ ಪ್ರಕಾರ ತಮ್ಮನ್ನು ಮುಂದುವರೆಸಲು ಸಾಧ್ಯವಿಲ್ಲಾ. ಆ ಮೇಲೆ ತಮ್ಮನ್ನು ಗುಲ್ಬರ್ಗಕ್ಕೋ ಅಥವಾ ಬೀದರ್‌ಗೋ ಕಳುಹಿಸುತ್ತೇವೆ ಅಂತ ಹೇಳಿದ್ದರೆ ಆವಾಗ ಆ ನೌಕರರುಗಳು ಈ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಬರುತ್ತಾ ಇರಲಿಲ್ಲಾ. ೫ ವರ್ಷದಿಂದ ಅವರುಗಳ ಸೇವೆಯನ್ನು ತಾವು ತೆಗೆದುಕೊಂಡು, ಆ ನಾಲ್ಕನೇ ತರಗತಿ ನೌಕರರನ್ನು ಅದರಲ್ಲೂ ಅಲ್ಲಿರತಕ್ಕಂಥಾ ಹರಿಜನರನ್ನು ಬೇರೆ ಕಡೆಗೆ ಅಂದರೆ ಬಳ್ಳಾರಿಗೋ ಗುಲ್ಬರ್ಗಕ್ಕೋ ಬೀದರ್‌ಗೋ ಬೇರೆ ಬೇರೆ ಜಿಲ್ಲೆಗೆ ವರ್ಗಾಯಿಸಿದ್ದೀರಲ್ಲಾ ಇದು ಹರಿಜನರ ಮೇಲೆ ಇಟ್ಟಿರತಕ್ಕಂಥಾ ಒಂದು ವಿಶ್ವಾಸವೇ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

SRI D.B. PAWAR :— Sri, any Government servant, who is sent on deputation, is required to serve for only five years. Aftear five years he is given an option to prefer whether he would like to get repatriated to his parent department or would like to remain in the Corporation. In this case a notice was given to them for repatriation. That is why they have been changed.

ಶ್ರೀ ಎ. ರಾಮಚಂದ್ರ :—ಅದರಲ್ಲಿ ಇಬ್ಬರು ಬಡ ನೌಕರರು ಒಂದು ವರ್ಷದಿಂದ ಮನವಿಯನ್ನು ಕೊಟ್ಟು, ಕೊಟ್ಟು ಆದಕ್ಕೆ ಅವರು ಏನೊಂದು ಉತ್ತರ ಕೊಡದೇ ಇದ್ದದ್ದರಿಂದ ಅವರಿಬ್ಬರೂ ಹೊದದೇ ರಜೆ ಕೊಟ್ಟು, ಹೋಗಿದ್ದಾರೆ. ಅವರೆಲ್ಲಾ ಹರಿಜನರಿದ್ದಾರೆ. ಇನ್ನೊಬ್ಬ ಬಳ್ಳಾರಿ ಜಿಲ್ಲೆಯಲ್ಲಿ ಇದ್ದಾನೆ. ಅವನುಮಂಗಳೂರಿನಲ್ಲಿ ಒಂದು ವೇಕನ್ಸಿ ಇದೆ ಕೂಡಿ ಎಂದು ಹೇಳಿದರೂ ಕೂಡ ನಮ್ಮಲ್ಲಿ ವೇಕೆನ್ಸಿ ಇಲ್ಲ. ಎಂದು ಹೇಳಿದ್ದಾರೆ. ಮತ್ತು ಅಲ್ಲಿ ಬೇರೆಯವರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಏನು ಹೇಳುತ್ತೀರಿ?

SRI D.B. PAWAR :— Even now, if they want to go back to the Corporation, the Government will consider that.

ಅಧ್ಯಕ್ಷರು .— ಕಾರ್ಪೊರೇಷನ್‌ಗೆ ಪುನಃ ಹೋಗುವುದಾದರೆ ಕನ್‌ಸಿಡರ್ ಮಾಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ.

ಶ್ರೀ ಎ. ರಾಮಚಂದ್ರ .—ಸ್ವಾಮಿ, ನಾನು ಹೇಳಬೇಕಾದರೆ ಅವರನ್ನು ಆ ಡಿಪಾರ್ಟ್‌ಮೆಂಟ್‌ಗೇ ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಈ ರೀತಿ ಮೋಸ ಮಾಡಿ ಬೇರೆಯವರನ್ನು ತೆಗೆದುಕೊಳ್ಳುತ್ತಾರಲ್ಲ ಇದು ಸರಿಯೇ?

ಅಧ್ಯಕ್ಷರು ,— ಅವರಿಗೆ ಮೊದಲೇ ಹೋಗುತ್ತೀರಾ ಅಥವಾ ಹೇಗೆ ಎಂದು ಕೇಳಿರುತ್ತಾರೆ. ಕಾರ್ಪೊರೇಷನ್‌ಗೆ ಹೋಗುತ್ತೇವೆಂದು ಹೇಳಿದಮೇಲೆ ಬೇರೆಯವರನ್ನು ತೆಗೆದುಕೊಂಡಿದ್ದಾರೆ. ಅದನ್ನೇ ಅವರು ಹೇಳುತ್ತಾ ಇರುವುದು.

ಶ್ರೀ ಎ. ರಾಮಚಂದ್ರ .— ಸ್ವಾಮಿ, ತಾವು ಉತ್ತರ ಕೊಟ್ಟದ್ದು ಒಳ್ಳೆಯದು ಆಯಿತು.

ಅಧ್ಯಕ್ಷರು .— ಅವರೇ ಹೇಳಿದ್ದಾರಲ್ಲ ಹಾಗಂತ.

ಶ್ರೀ ಎ. ರಾಮಚಂದ್ರ .— ಅವರು ಹೇಳಿದ್ದನ್ನೇ ಹೇಳುತ್ತಾರೆ, ಅವರಿಗೆ ಬೇರೆ ಏನೂ ಹೇಳುವುದಕ್ಕೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು .— ನೀವು ಪ್ರಶ್ನೆ ಏನು ಹಾಕಬೇಕೋ ಅದನ್ನು ಹಾಕಿ, ಹಾಗೆಲ್ಲಾ ನೀವು ಕಾಮೆಂಟ್ ಮಾಡಿಬೇಡಿ.

ಶ್ರೀ ಜಿ.ಕೆ, ತಕ್ಕೇಡ್ . — ಮಾನ್ಯ ಮಂತ್ರಿಯವರು ಕನ್ನಡದಲ್ಲಿ ಉತ್ತರವನ್ನು ಕೊಡಲಿ. ಇಂಗ್ಲೀಷ್‌ನಲ್ಲಿ ಅವರು ಉತ್ತರ ಕೊಡುವುದರಿಂದ ಅವರಿಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು .— ನೀವು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಪವಾರ್.– ಮಾನ್ಯ ಅಧ್ಯಕ್ಷರೇ ಇವತ್ತು ಅವರಿಗೆ ಕಾರ್ಪೊರೇಷನ್‌ಗೆ ವಾಪಸ್ಸು ಹೋಗ ಬೇಕೆಂದು ಇಚ್ಛೆ ಇದ್ದರೆ ಅದನ್ನು ನಾವು ವಿಚಾರ ಮಾಡುತ್ತೇವೆ.

ಶ್ರೀ ಎ. ರಾಮಚಂದ್ರ .— ಅವರಿಗೆ ಕಾರ್ಪೋರೇಷನ್‌ಗೆ ಬರುವುದಕ್ಕೆ ಇಚ್ಛೆ ಇರಬಹುದು. ಆದರೆ ಅಲ್ಲಿ ೪–೫ ವರ್ಷ ಅವರು ಕೆಲಸ ಮಾಡಿದನಂತರ ತಿರುಗಿ ನೀವು ಅವರನ್ನು ಅಲ್ಲಿಗೇ ಕಳಿಸುತ್ತೀರಿ. ಅವರಿಗೆ ಜವಾಬ್ದಾರಿ ಬೇಕು. ಇನ್ನುಮುಂದೆ ನಿಮ್ಮನ್ನು ಕೈಬಿಡುವುದಿಲ್ಲ, ನಿಮ್ಮನ್ನು ಪರ ಊರಿಗೆ ಕಳುಹಿಸುವುದಿಲ್ಲ ಎನ್ನುತಕ್ಕಂಥ ಒಂದು ಆಶ್ವಾಸನೆಯನ್ನು ನೀವು ಕೊಟ್ಟರೆ ಅವರು ಬರುತ್ತಾರೆ, ಅವರಿಗೆ ಕಾರ್ಪೊರೇಷನ್‌ಗೆ ಬರುವುದಿಲ್ಲ ಅಂತ ಏನೂ ಇಲ್ಲ.

SRI D.B.PAWAR .— Sir, I did not understand his question.

Waiving of Irrigation Loans in Tumkur District

474 SRI V. L. SHIVAPPA (Tiptur).—Will the Minister for Co-operation be pleased to state.—

(a) the number of representations that are pending either for Waiving the irrigation loans in respect of Wells which are not fit for use (without fetching sufficient water) or requesting for payment of Compensation in Tumkur District;

(b) out of this, the number of irrigation Wells that are more than a year ?